





ರಾಜರ ಸಂಪ್ರದಾಯದಂತೆ ಅವರ ಗೋರಿಗಳ ಮೇಲೆ ಅವರ ಸವಿನೆನಪಿಗಾಗಿ ನೆಟ್ಟಿದ್ದರೆಂಬ ಪ್ರತೀತಿ ಇದೆ. ಮುನ್ನೂರರಿಂದ ನಾಲ್ಕೂರು ವರ್ಷಗಳ ಹಳೆಯ ಮರವೊಂದಿದ್ದು ಮರದಡಿಯಲ್ಲಿ ಸುಂದರವಾದ ಮಹಾರಾಜರ ಒಂದೆರಡು ಗೋರಿಗಳು ಇವೆ. ಗುಡ್ಡದ ದಕ್ಷಿಣ ದಿಕ್ಕಿನ ಕೋಟೆಯ ಹೊರಭಾಗದಲ್ಲಿ ರಾಮದಾಸರ ಮಂಟಪವೊಂದಿದೆ. ಕೋಟೆಯ ಮಧ್ಯೆ ಆನೆಹೊಂಡ, ಜಳಕದ ಹೊಂಡ, ಮುಸುರಿ ಹೊಂಡ, ಮದ್ದಿನ ಹೊಂಡ, ಆನೆಹೆಜ್ಜೆ ಹೊಂಡ ಎಂಬ ಪಂಚಹೊಂಡಗಳಿದ್ದು ಪ್ರತಿಯೊಂದು ಹೊಂಡಗಳು ತನ್ನದೆ ಆದ ಪ್ರಾಮುಖ್ಯತೆಯನ್ನು ಹೊಂದಿದ್ದುವು.

**ಆನೆಹೊಂಡ:** ರಾಜರಿಂದ ನಿರ್ಮಿಸಲ್ಪಟ್ಟ ಈ ಹೊಂಡ ಕಲ್ಲಿನ ಮಧ್ಯಭಾಗದಲ್ಲಿದೆ. ಈ ಹೊಂಡದ ನೀರು ಶುದ್ಧವಾಗಿದ್ದು ಇದನ್ನು ರಾಜರು ಕುಡಿಯಲು, ಅರಮನೆಯ ಬಳಕೆಗೆ ಉಪಯೋಗಿಸುತ್ತಿದ್ದರಂತೆ. ವಿಶೇಷವೆಂದರೆ ಹೊಂಡದ ನೀರನ್ನು ಕೈಯಿಂದಲೇ ತೆಗೆಯಬಹುದಾಗಿದೆ. ಇಂದಿಗೂ ಸಾರ್ವಜನಿಕರು ಈ ಹೊಂಡದ ನೀರನ್ನು ಕೈಕಾಲು ತೊಳೆಯಲು ಬಳಸುವಂತಿಲ್ಲ.

**ಜಳಕದ ಹೊಂಡ:** ರಾಜರು ಹೊಳಲಮ್ಮ ದೇವಿಯ ಪೂಜೆಯ ಸಂದರ್ಭ ದೇವಿಯ ಜಳಕಕ್ಕಾಗಿ ಈ ಹೊಂಡದ ನೀರನ್ನು ಬಳಸುತ್ತಿದ್ದರು. ರಾಜರಲ್ಲದೆ ಇತರರು ಈ ಹೊಂಡದ ನೀರನ್ನು ಮುಟ್ಟುವುದು ಅಶುದ್ಧವೆಂಬ ಭಾವನೆ ಆ ಕಾಲದಲ್ಲಿತ್ತು.

**ಮುಸುರಿ ಹೊಂಡ:** ರಾಜರ ಕಾಲದಲ್ಲಿ ಸೈನಿಕರು ಹಾಗೂ ಮಹಾರಾಜರು ಉಂಡು ಉಳಿದ ಅನ್ನವನ್ನು ಚೆಲ್ಲುವ ಹೊಂಡವನ್ನು ಮುಸುರಿ ಹೊಂಡ ಎಂದು ಕರೆಯುತ್ತಾರೆ. ಇಂದಿಗೂ ಆ ಹೊಂಡ ಹಾಗೆ ಇದೆ. ಹೊಂಡದಲ್ಲಿ ಈಗ ಕಸಕಡ್ಡಿಗಳೇ ತುಂಬಿಕೊಂಡಿವೆ.

**ಮದ್ದಿನ ಹೊಂಡ:** ಯುದ್ಧಕ್ಕೆ ಬೇಕಾದ ಮದ್ದು ಗುಂಡುಗಳನ್ನು ಇದರಲ್ಲಿ ಸಂಗ್ರಹಿಸಿಡಲಾಗುತ್ತಿತ್ತು. ಹೊಂಡದ ಸುತ್ತಲಿನ ಒಳಭಾಗದಲ್ಲಿ ಕೈ ಹೋಗುವ ಗಾತ್ರದ ಗುಂಡಿಗಳಿದ್ದು ಅದರಲ್ಲಿ ಮದ್ದುಗುಂಡುಗಳನ್ನು ಸಂಗ್ರಹಿಸಿಡಲಾಗುತ್ತಿತ್ತು. ಇದೀಗ ಈ ಹೊಂಡದಲ್ಲಿ ಮಳೆನೀರು ಸಂಗ್ರಹವಾಗುತ್ತಿದ್ದು ಇಂದಿಗೂ ಇದರಲ್ಲಿ ಸಂಗ್ರಹವಾಗುವ ಮಳೆನೀರು ಮದ್ದಿನ ವಾಸನೆಯಿಂದ ಕೂಡಿರುತ್ತದೆ. ಈ ಗುಂಡಿಯ ನೀರಿನಲ್ಲಿ ಸ್ನಾನ ಮಾಡಿದರೆ ಚರ್ಮರೋಗ ವಾಸಿಯಾಗುತ್ತದೆಯೆನ್ನುವ ನಂಬಿಕೆಯಿದೆ.

**ಆನೆಹೊಂಡ:** ಐದು ಹೊಂಡಗಳಲ್ಲಿ ಇದು ಅತಿ ಚಿಕ್ಕ ಹೊಂಡ. ಇದು ಆನೆಯ ಹೆಜ್ಜೆಯ ಗಾತ್ರದಲ್ಲಿದ್ದು ಇದರಲ್ಲಿನ ನೀರನ್ನು ಕಣ್ಣುಗಳಿಗೆ ಹಚ್ಚಿಕೊಂಡರೆ ಜೀವನ ಪರ್ಯಂತ ಕಣ್ಣು ನೋವು ಬರುವುದಿಲ್ಲವಂತೆ.

ಉರಿಯುವ ಸುಡುಬಿಸಿಲಿನ ಕಾಲದಲ್ಲೂ ಈ ಕೋಟೆಯ ಮೇಲೆ ತಣ್ಣನೆಯ ಗಾಳಿ ಬೀಸುತ್ತಿದ್ದು ಕೋಟೆಯ ಮೇಲಿಂದ ಸುತ್ತಲಿನ ಹಚ್ಚಹಸುರಿನ ಪರಿಸರವನ್ನು ವೀಕ್ಷಿಸಬಹುದು. ಛಾಯಾಗ್ರಾಹಕರ ಪಾಲಿಗಂತೂ ಇದೊಂದು ಅಪರೂಪದ ತಾಣ. ಈ ಕೋಟೆಗೆ ಉತ್ತರ ಕನ್ನಡದ ಅಂಕೋಲದಲ್ಲಿರುವ ಮಿರ್ಜಾನ್ ಕೋಟೆಯಂತೆ ಮರುಜೀವ ತುಂಬುವ ಪ್ರಯತ್ನ ನಡೆದಲ್ಲಿ ಇದೊಂದು ಉತ್ತಮ ಪ್ರವಾಸಿ ತಾಣವಾಗಬಹುದು.